Tumbe Group of International Journal
A Peer Reviewed Multidisciplinary Journal
ISSN: 2581-8511
Volume- 3
Issue-1
January-April: 2020

# ಚಿಂತನಾ ಸ್ವಾತಂತ್ರವನ್ನು ಪೋಷಿಸುವ 'ಮಾರೀಚನ ಬಂಧುಗಳು'

**ಡಾ. ಸ್ವಾಮಿ ನ ಕೋಡಿಹಳ್ಳಿ,**
ಉಪನ್ಯಾಸಕರು, ಕನ್ನಡ ವಿಭಾಗ, ಸ್ಕೂಲ್ ಆಫ್ ಲಿಂಗ್ವಿಸ್ಟಿಕ್ಸ್ ಅಂಡ್ ಲಾಂಗ್ವೇಜ್,
ಕೇರಳ ಕೇಂದ್ರೀಯ ವಿಶ್ವವಿದ್ಯಾನಿಲಯ, ತೇಜಸ್ವನಿ ಹಿಲ್ಸ್, ಪೆರಿಯಾ, ಕಾಸರಗೋಡು, ಕೇರಳ, ಭಾರತ.
Swamykn85@gmail.com, ಮೊಬೈಲ್: 09845346098

**ಪೀಠಿಕೆ:**

ನಾಟಕ ಕೃತಿಯೊಂದು ರಂಗಕೃತಿಯಾಗಿ ರುಪಾಂತರಗೊಳ್ಳುವಲ್ಲಿ ಅನೇಕ ವ್ಯತ್ಯಾಸಗಳು ಪ್ರಕ್ರಿಯೆಗಳು ನಡೆದಿರುತ್ತವೆ. ಕುವೆಂಪು ಅವರು ನಾಟಕಗಳನ್ನು ಬರೆದ ಆರಂಭದ ದಿನಗಳಲ್ಲಿ "ನನ್ನ ನಾಟಕಗಳು ಮನೋರಂಗಭೂಮಿಯ ನಾಟಕಗಳು" ಎಂದಿದ್ದರು. ಇದಕ್ಕೆ ಕಾರಣ ಅವರ ನಾಟಕಗಳನ್ನು ರಂಗದ ಮೇಲೆ ತರಲು ಅನೇಕ ತಾಂತ್ರಿಕ ತೊಡಕುಗಳಿವೆ ಎಂದು ಹೇಳುತ್ತಿದ್ದ ಆಗಿನ ನಿರ್ದೇಶಕವರ್ಗ. ಆದರೆ ನಂತರದ ದಿನಮಾನಗಳಲ್ಲಿ ಅವರ ನಾಟಕಗಳು ರಂಗಪ್ರವೇಶಿಸಿದ್ದು ನಮಗೆಲ್ಲ ತಿಳಿದಿದೆ. ರಂಗಕೃತಿಗೆ ಭಾಷಿಕವಾದ ಯಾವುದೇ ಮಿತಿಗಳು ಇರುವುದಿಲ್ಲ. ಆದ್ದರಿಂದಲೇ ರಂಗಕೃತಿಗಳು ಎಲ್ಲಕಡೆಗಳಲ್ಲಿಯೂ ಸಂವಹನಗೊಳ್ಳುತ್ತವೆ. ದೇಶ ಮತ್ತು ಭಾಷಿಕ ಗಡಿಗಳನ್ನು ಮೀರಿದ ಸಂದೇಶವನ್ನು ಸಾರುತ್ತಿರುತ್ತವೆ. ನಾಟಕ ಎಷ್ಟೇ ಪ್ರಾಚೀನವಾದ ಕಥಾವಸ್ತುವನ್ನು ನಿರ್ವಹಿಸಿದರೂ ಆ ವಸ್ತುವನ್ನು ವರ್ತಮಾನಗೊಳಿಸುತ್ತಿರುತ್ತವೆ. ಇಂತಹ ಪ್ರಾಚೀನವಾದ ಕಥಾವಸ್ತುವನ್ನು ವರ್ತಮಾನ ಗೊಳಿಸುವ ನಿಟ್ಟಿನಲ್ಲಿ ಅರುಣ್ ಮಹೋಪಾಧ್ಯಾಯ ಅವರ 'ಮಾರೀಚನ ಬಂಧುಗಳು' ಮುಖ್ಯವಾದ ರಂಗಕೃತಿಯಾಗಿದೆ.

'ಮಾರೀಚನ ಬಂಧುಗಳು' ಬಂಗಾಲದ ಅರುಣ್ ಮಹೋಪಾಧ್ಯಾಯ ಅವರು 1970ರ ದಶಕದಲ್ಲಿ ಬರೆದ ನಾಟಕ. ಇದು ಚಿಂತನಾ ಸ್ವಾತಂತ್ರ್ಯವನ್ನು ಪುರಾಣಕಥೆಯಿಂದ ಆಧುನಿಕ ಸಮಾಜದವರೆಗೆ; ದೇಶದಿಂದ ವಿದೇಶದವರೆಗೆ ಭಿನ್ನ ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಾಖ್ಯಾನಿಸುತ್ತದೆ. ಈ ನಾಟಕವನ್ನು ಬಿಂಡಿಗನವಿಲೆ ನಾರಾಯಣ ಸ್ವಾಮಿಯವರು ಕನ್ನಡೀಕರಿಸಿದ್ದಾರೆ. 2017 ಜನವರಿ 4 ಮತ್ತು 5ರಂದು ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದ ವಿದ್ಯಾರ್ಥಿಗಳು ಈ ನಾಟಕವನ್ನು ಅಭಿನಯಿಸಿದರು.

ಈ ರಂಗಕೃತಿಯನ್ನು ನೋಡುವಾಗ ನಮ್ಮ ಓದು ನಮಗೆ ಮಾರೀಚನ ಬಗ್ಗೆ ನೀಡಿದ್ದ ತಿಳಿವನ್ನು ಮರು ಅವಲೋಕನ ಮಾಡಿಕೊಳ್ಳುವಂತೆ ಮಾಡುತ್ತದೆ. ಏಕೆಂದರೆ ನಮ್ಮ ಸಾಹಿತ್ಯ ವಲಯ ಮಾರೀಚನನ್ನು ಚಿತ್ರಸಿರುವುದು ರಾಕ್ಷಸೀಕರಿಸಿ

(1) ಮರೀಚಿ ಮುನಿಯ ಪುತ್ರನಾದ ಕಾಶ್ಯಪನಿಗೆ ಮಾರೀಚ ಎಂಬ ಹೆಸರು ಬಂದಿದೆ.
(2) ಸುಂದನೆಂಬ ರಾಕ್ಷಸನಿಂದ ಸುಕೇತು ಪುತ್ರಿಯಾದ ತಾಟಕೆಯೆಂಬ ಯಕ್ಷ-ಸ್ತ್ರೀಯಲ್ಲಿ ಜನಿಸಿ ಅಗಸ್ತ್ಯನ ಶಾಪದಿಂದ ರಾಕ್ಷಸನಾದ.
(3) ವಿಶ್ವಾಮಿತ್ರ ಸಿದ್ಧಾಶ್ರಮದಲ್ಲಿ ಯಾಗ ಮಾಡುತ್ತಿದ್ದಾಗ ಮಾರೀಚ ಆತನ ಯಜ್ಞವನ್ನು ಹೊಲಸು ಮಾಡತೊಡಗಿ ರಾಮನಿಂದ ವಾಯುವ್ಯಾಸ್ತ್ರದ ಮೂಲಕ ಸಮುದ್ರದ ಆಚೆಗೆ ಬಿದ್ದ.
(4) ಮಾರೀಚ ಮಾಯಾಮೃಗ ರೂಪವನ್ನು ತಳೆದು, ಸೀತೆಯನ್ನು ಮರುಳು ಮಾಡಿದ. ಬಳಿಕ ರಾಮನಿಂದ ಮಾರೀಚ ಮಡಿದ" [ಪುಟ 464 ಮತ್ತು 465. ಪುರಾಣನಾಮ ಚೂಡಾಮಣಿ]

ಎಂದು ಮಾರೀಚನ ವ್ಯಕ್ತಿತ್ವವನ್ನು ರಾಕ್ಷಸೀಕರಿಸಿಕೊಂಡು ಹೇಳಲಾಗಿದೆ ಮತ್ತು ನಾವು ಕೇಳಿಸಿಕೊಂಡಿದ್ದೇವೆ. ಆದರೆ ಈ ನಾಟಕದಲ್ಲಿ ಅರುಣ್ ಮಹೋಪಾಧ್ಯಾಯರು ಮಾರೀಚನ ಚಿಂತನಾ ಪ್ರಪಂಚಕ್ಕೆ ಆದ್ಯತೆ ನೀಡಿ 'ತನ್ನ ಮಾಯಾ ವಿದ್ಯೆಯನ್ನು ರಾಮನ ವಿರುದ್ಧ ಬಳಸಲಾರೆ ಶೂರ್ಪನಕಿ ಅವಮಾನಿತಳಾದ ಸನ್ನಿವೇಶವನ್ನು ರಾವಣನಿಗೆ ಅರ್ಥೈಸಲು ಮಾರೀಚ ಪ್ರಯತ್ನಪಟ್ಟು ಅದು ಸಾಧ್ಯವಾಗದೇ ಆತ್ಮಹತ್ಯೆ ಮಾಡಿಕೊಳ್ಳುವಂತೆ ಚಿತ್ರಿಸಿದ್ದಾರೆ.

ನಾಟಕದ ಮತ್ತೊಂದು ಪಾತ್ರ ಗ್ರೆಗರಿ. ಅಮೇರಿಕಾದ ಗ್ರೆಗರಿ ಕೂಡ ಯುದ್ಧದ ಸಂದರ್ಭದಲ್ಲಿ ಸುದ್ದಿಗಾರನಾಗಿ ಯುದ್ಧ ಭೂಮಿಗೆ ಹೋಗುವುದನ್ನು ವಿರೋಧಿಸುತ್ತಾನೆ. ಅಮೇರಿಕಾದ ಯುದ್ಧವಿರೋಧಿ ನೀತಿಯ ಕೆಡಕಿನ ಬಗ್ಗೆ ನಿಯತ ಕಾಲಿಕೆಗೆ ಲೇಖನ ಬರೆದು ಪ್ರಕಟಿಸುತ್ತಾನೆ. ಇದನ್ನು ಅಮೇರಿಕನ್ ಪಾರ್ಲಿಮೆಂಟ್ ವಿರೋಧಿಸಿ ಮ್ಯಾಕಿ ಮೂಲಕ ತನ್ನ ಲೇಖನಕ್ಕೆ ಪ್ರತಿಯಾದ ಲೇಖನವೊಂದನ್ನು ಬರೆದು ಅಮೇರಿಕಾದ ಫಾರಿನ್ ಪಾಲಿಸಿಯನ್ನು ಪುರಸ್ಕರಿಸಬೇಕೆಂದು ಒತ್ತಾಯಿಸುತ್ತದೆ. ಗ್ರೆಗರಿಗೆ ತನ್ನ ಚಿಂತನಾ ಕ್ರಮದ ವಿರುದ್ಧವೇ ತಾನು ಪ್ರತಿಕ್ರಿಯಿಸಲಾಗದೆ ಆತನೂ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಈ ಎರಡೂ ಆತ್ಮಹತ್ಯಾ ಪ್ರಕರಣಗಳು ರಂಗದ ಮೇಲೆ ಘಟಿಸದೆ ನೋಡುಗರ ವಿಚಾರ ಸರಣಿಗೆ ಪುಷ್ಠಿಕೊಡುತ್ತವೆ. ಇನ್ನು ರೈತನ ಪ್ರತಿನಿಧಿಯದ ಈಶ್ವರನ ಪಾತ್ರವು ಆಟಗಾರನಾದ ಉಸ್ತಾದನ ನಿರ್ದೇಶನದಂತೆ ಆತ್ಮಹತ್ಯೆ ಮಾಡಿಕೊಳ್ಳಬೇಕು. ಆದರೆ ಈಶ್ವರ ಶ್ರಮಿಕವರ್ಗದ ಎಚ್ಚೆತ್ತ ಪ್ರಜ್ಞೆಯಾಗಿ ಉಸ್ತಾದನ ಚೌಕಟ್ಟನ್ನು ಮೀರಿ ತನ್ನ ಅರಿವಿನ ಪ್ರಜ್ಞೆಯನ್ನು ಹೆಚ್ಚಿಸಿಕೊಳ್ಳುತ್ತಾನೆ. ಇದರಿಂದ ಮಂತ್ರದಂಡದ ಮೂಲಕವೇ ಪಾತ್ರಗಳನ್ನು ನಿಯಂತ್ರಿಸುವ ಕಥಾಸಂವಿಧಾನವನ್ನು ನಿರ್ವಹಿಸುವ ಉಸ್ತಾದನಿಗೆ ನಾಟಕ ಮುಗಿಸುವುದು ತಲೆನೋವಾಗಿ ಪರಿಣಮಿಸುತ್ತದೆ. ಅಲ್ಲದೆ ಈಶ್ವರ ಮಾರೀಚ ಮತ್ತು ಗ್ರೆಗರಿ ಆತ್ಮಹತ್ಯೆಯನ್ನು ವಿರೋಧಿಸುತ್ತಾನೆ. ನಾಟಕವು ಹೋರಾಟದ ಸೋಲನ್ನು ಒಪ್ಪಿಕೊಳ್ಳಬಾರದು ಎಂಬ ವಾದವನ್ನು ಮುಂದೊಡ್ಡಿ ಈ ಮಾರೀಚನ ಪಾತ್ರವನ್ನು ಚಿತ್ರಿಸಿದ 'ಮಹಾಕವಿ ವಾಲ್ಮೀಕಿ' ಯನ್ನು ವಿಮರ್ಶೆಗೆ ಗುರಿಪಡಿಸಿ ವಿಚಾರಣೆಗೆ ಒಳಗುಮಾಡುತ್ತದೆ. ಈ ಸಂದರ್ಭದ ಮಾರೀಚ ಮತ್ತು ವಾಲ್ಮೀಕಿಯರ ಸಂವಾದ ಮಾರೀಚನ ಚಿಂತನಾ ಪ್ರಪಂಚವನ್ನು ವಿಸ್ತರಿಸುತ್ತದೆ. ವಾಲ್ಮೀಕಿ "ನನ್ನ ಕಾಲದ ಮನೋಧರ್ಮಕ್ಕೆ ತಕ್ಕಂತೆ ನಾನು ಮಾರೀಚನನ್ನು ನಿರೂಪಿಸಿದೆ. ಮಾರೀಚನಲ್ಲಿ ಇಷ್ಟೊಂದು ಚಿಂತನಾ ಪ್ರಖರತೆ ಇರುತ್ತದೆ ಎಂದು ನಾನು ಊಹಿಸಿರಿಲಿಲ್ಲ" ಎಂದು ಹೇಳುವಾಗ ಪಾತ್ರವೊಂದರ ಗುಣಧರ್ಮವನ್ನು "ಏಕಮೇವಾದ್ವಿತೀಯ" ಎಂದು ಗ್ರಹಿಸಲಾಗದು ಎಂಬುದನ್ನು ನೋಡುಗರAಲ್ಲಿ ಬಿತ್ತರಿಲಾಗಿದೆ.

ಉಸ್ತಾದನ ಮಂತ್ರದಂಡದಿಂದ ನಿರ್ದೇಶಿಸಲ್ಪಡುವ ಪಾತ್ರಗಳನ್ನು ಮೂರು ಗುಂಪುಗಳಾಗಿ ಗ್ರಹಿಸಬಹುದು. ಮಾರೀಚ, ಈಶ್ವರ, ಗ್ರೆಗರಿ ಮೊದಲ ಗುಂಪಿಗೆ ಸೇರುವ ಈ ಪಾತ್ರಗಳು ವ್ಯಕ್ತಿ ಸ್ವಾತಂತ್ರ್ಯ ಮತ್ತು ಚಿಂತನಾ ಸ್ವಾತಂತ್ರ್ಯವನ್ನು ಪೋಷಿಸುವ ಪಾತ್ರಗಳು. ಕಾಲನೇಮಿ, ಕರಣಿಕ, ಮ್ಯಾಕ್ ಪಾತ್ರಗಳು ಆಳುವ ವರ್ಗದ ಶೋಷಕ ಬುದ್ಧಿಯನ್ನು ಪೋಷಿಸುವ ಮತ್ತು ಜನಸಾಮಾನ್ಯರ ದಾಸ್ಯಬುದ್ಧಿಯನ್ನು ಜೀವಂತವಾಗಿಸಲು ಶ್ರಮಿಸುತ್ತ ಅನುಕೂಲವಾದಿಗಳಾದ ಸ್ವಂತಿಕೆಯೇ ಇಲ್ಲದೆ ಬದುಕುವ ಪಾತ್ರಗಳು. ರಾವಣ, ಜಮೀನುದಾರ, ವಿಲಿಯಂಸ್ ಈ ಮೂರು ಪಾತ್ರಗಳು ತಮ್ಮ ಸುತ್ತಲಿನ ವ್ಯವಸ್ಥೆಯೊಂದನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಹಿಂಬಾಲಕರ ಗುಂಪೊಂದನ್ನು ಕಟ್ಟಿಕೊಂಡು ಅದರ ಮೂಲಕ ತಮ್ಮ ಸ್ಥಾನವನ್ನು ಭದ್ರಗೊಳಿಸಲೆತ್ನಿಸುತ್ತಿರುವ ಪಾತ್ರಗಳು. ಇವರಿಗೆ ಸಮಾಜದ ಹಿತಕ್ಕಿಂತ ಸ್ವಹಿತ, ಪ್ರತಿಷ್ಠೆ ಮುಖ್ಯವಾಗುತ್ತದೆ. ಚಿಂತನಾ ಸ್ವಾತಂತ್ರ್ಯವನ್ನು ಪೋಷಿಸುವಲ್ಲಿ ಮಾರೀಚನಿಗೆ ರಾಮ; ಈಶ್ವರನಿಗೆ ರಘುನಾಥ; ಗ್ರೆಗರಿಗೆ ಆತನ ತಂದೆಯ ವಿಚಾರಧಾರೆ ಪೋಷಕವಾಗಿ ನಿಲ್ಲುತ್ತವೆ.

ಈಗಾಗಲೇ ತಿಳಿಸಿದಂತೆ 'ವಾಲ್ಮೀಕಿಯ ವಿಚಾರಣೆ' ಮಹಾಕವಿಗೆ ಕಸಿವಿಸಿಯನ್ನು ಉಂಟು ಮಾಡಿದರೂ, ವಾಲ್ಮೀಕಿ ವಿವರಣೆ ಕೊಡುವುದು ನಾಟಕದ ಸಂವಿಧಾನದಲ್ಲಿ ಅನಿವಾರ್ಯವಾಗುತ್ತದೆ. ತಾನು ಸೃಜಿಸಿದ ಪಾತ್ರದ ಮೂಲಕವೇ ವಿಚಾರಣೆಗೆ ಒಳಗಾಗುವ ವಾಲ್ಮೀಕಿ ತನ್ನ ಕಾಲಘಟ್ಟದ ಜನರ ಆಶೋತ್ತರಗಳಿಗೆ ಸ್ಪಂದಿಸಿ ಮಾರೀಚನ

ಅಕಾಲಿಕ ಮರಣದ ನಿರ್ಧಾರವನ್ನು ಸಮರ್ಥಿಸಿಕೊಂಡರೂ ಈಶ್ವರನ ಬದುಕುವ ಹಕ್ಕನ್ನು ಪುರಸ್ಕರಿಸುತ್ತಾನೆ. ಶ್ರಮಜೀವಿಯಾದವನು ತನ್ನ ನಿರ್ಧಾರಗಳ ಮೂಲಕ ಸಮಾಜದ ನಿಯಮಗಳನ್ನು ಬದಲಿಸಬಹುದು ಎಂಬುದನ್ನು ಈಶ್ವರ ಸಾಧಿಸಿ ತೋರಿಸಿದ್ದಾನೆ. ಬುದ್ಧಿಜೀವಿಗಳಾದ ಮಾರೀಚನಿಂದಾಗಲೀ, ಗ್ರೆಗರಿಯಿಂದಾಗಲೀ ಆಳುವ ವರ್ಗದ ಬಂಧನದಿಂದ ಮುಕ್ತವಾಗಲು ಸಾಧ್ಯವಾಗಲಿಲ್ಲ. ಅದಕ್ಕಾಗಿ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಮಾರೀಚ ಮತ್ತು ಗ್ರೆಗರಿಯ ಚಿಂತನಾ ಸ್ವಾತಂತ್ರ್ಯ ಫಲ ಕೊಡದೇ ಹೋಗುವುದು ಈ ಕಾರಣಕ್ಕಾಗಿ ಆದರೂ ಮಾರೀಚನಲ್ಲಿ ಉದಿಸಿದ ಈ ಚಿಂತನೆ ಈಶ್ವರನಲ್ಲಿ ಸಮೃದ್ಧಿಗೊಳ್ಳುತ್ತದೆ. ಸತ್ತಮೇಲೂ ಮಾರೀಚನ ಮತ್ತು ಗ್ರೆಗರಿಯ ಅವ್ಯಕ್ತ ಆತ್ಮಗಳು ಈಶ್ವರನ ಬೆಂಬಲಕ್ಕೆ ನಿಲ್ಲುತ್ತವೆ. ಆಗ ಉಸ್ತಾದನ ಮೂದಲಿಕೆ ಅವರ ಸಾವಿನ ತೀರ್ಮಾನವನ್ನು ವಿಮರ್ಶಿಸಿದರೂ ಪ್ರಯೋಜನವಾಗುವುದಿಲ್ಲ.

ನಾಟಕದ ಪ್ರಾಪರ್ಟಿಯ ಭಾಗವಾಗಿ ಬಳಕೆಯಾಗುವ ಮರ, ಗುಡಿಸಲು, ಬಹುಮಹಡಿ ಕಟ್ಟಡಗಳು ಮನುಷ್ಯ ಪ್ರಕೃತಿಯಿಂದ ದೂರ ಸಾಗುತ್ತಿರುವ ಸತ್ಯವೊಂದನ್ನು ಮೂಕವಾಗಿ ಸಾರುತ್ತಿವೆ.

**ಉಪಸಂಹಾರ:**

‘ಮಾರೀಚನ ಬಂಧು’ ಕಾಲಾತೀತವಾದ ವಿಚಾರ ಪ್ರಕರತೆಯನ್ನು ತಿಳಿಸುವುದರ ಜೊತೆಗೆ ಕಲಾತ್ಮಕವಾಗಿ ವರ್ತಮಾನದ ಪ್ರಶ್ನಾರ್ಹವಲ್ಲದ ವರ್ಗಕ್ಕೆ ಪ್ರಶ್ನಿಸುವ ವಿವೇಕವೊಂದನ್ನು ನೀಡಿದೆ. ಉಸ್ತಾದನಂತಹ ಪಾತ್ರದ ಮೂಲಕ ಇಡೀ ಸಮಾಜವನ್ನು ನಿಯಂತ್ರಿಸುವ ವರ್ಗವೊಂದನ್ನು ನಿರ್ಮಿಸಿ ಈ ನಿಯಂತ್ರಿತ ವರ್ಗವನ್ನು ಮೀರಿ ನಿಲ್ಲುವ ಈಶ್ವರ್ ಮೂಲದಲ್ಲಿ ಮಾರೀಚನನ್ನು ಪ್ರತಿನಿಧಿಸುತ್ತಾನೆ. ನಮ್ಮ ಸಾಹಿತ್ಯ ವಾಙ್ಮಯ ಮರೆಮಾಚಿದ ಮಾರೀಚನ ಚಿಂತನಾಶೀಲತೆಯನ್ನು ಈ ರಂಗಕೃತಿ ವಿಭಿನ್ನವಾಗಿ ಅಭಿವ್ಯಕ್ತಿಸಿದೆ.

**ಆಕರಗಳು :**

[1] 4.1.2017ರಂದು ಅಭಿನಯಿಸಿದ ‘ಮಾರೀಚನ ಬಂಧುಗಳು’ ರಂಗಕೃತಿ

[2] ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರಶಾಸ್ತ್ರಿ, (ಸಂ) - ಪುರಾಣರಾಮ ಚೂಡಾಮಣಿ, 2010, ಪ್ರಸಾರಾಂಗ, ಮೈಸೂರು, ವಿಶ್ವವಿದ್ಯಾನಿಲಯ, ಮೈಸೂರು.

[3] ಮರುಳಸಿದ್ದಪ್ಪ ಕೆ. - ಆಧುನಿಕ ಕನ್ನಡ ನಾಟಕ, 2013, ಅಂಕಿತ ಪುಸ್ತಕ, ಬೆಂಗಳೂರು.